ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕ್ರಮಾಂಕ : ಬೆವಿಕಂ/ಬಿಸಿ31/3280/2012-13/746

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು – 01.
ದಿನಾಂಕ: 25 [illegible]

ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು,
ಕಾರ್ಯ ಮತ್ತು ಪಾಲನಾ ವೃತ್ತ,
ಬೆವಿಕಂ.

ಮಾನ್ಯರೇ,

ವಿಷಯ : ಹೆಚ್.ಆರ್.ಎಂ.ಎಸ್ ತಂತ್ರಾಂಶಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: ಕಂಪನಿ ಕಾರ್ಯಾಲಯದ ಪತ್ರ ಸಂಖ್ಯೆ: ಬಿಸಿ-31/3280/ 2014-15/721 ದಿನಾಂಕ: 16.02.2015.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೆಚ್.ಆರ್.ಎಂ.ಎಸ್ ತಂತ್ರಾಂಶವನ್ನು ಬೆವಿಕಂನ ಎಲ್ಲಾ ಕಛೇರಿಗಳಲ್ಲಿ ಫೆಬ್ರವರಿ ಅಂತ್ಯದವರೆಗೆ ಅಳವಡಿಸಿಕೊಂಡು, ಮಾರ್ಚ್ ತಿಂಗಳ ವೇತನದ ಬಿಲ್ಲನ್ನು ತಂತ್ರಾಂಶದ ಮೂಲಕ ಸಿದ್ಧಪಡಿಸುವ ಬಗ್ಗೆ ಈಗಾಗಲೇ ನಿರ್ಧಾರ ತೆಗೆದುಕೊಳ್ಳಲಾಗಿರುತ್ತದೆ. ಈ ಸಂಬಂಧ, ಅಗತ್ಯ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ: 20.02.2015 ರ ಒಳಗಾಗಿ ಕಂಪನಿ ಕಾರ್ಯಾಲಯಕ್ಕೆ ಒದಗಿಸುವಂತೆ ತಿಳಿಸಲಾಗಿದ್ದರೂ ಸಹಾ ಬಹುತೇಕ ಕಛೇರಿಗಳು ಇದುವರೆವಿಗೂ ಮಾಹಿತಿಯನ್ನು ಒದಗಿಸಿರುವುದಿಲ್ಲ.

ಮಾಹಿತಿಯನ್ನು ಕೂಡಲೇ ಒದಗಿಸಬೇಕಾಗಿರುವುದರಿಂದ, ಸಂಬಂಧಪಟ್ಟ ವಿಭಾಗದ ಲೆಕ್ಕಾಧಿಕಾರಿಗಳು ತಮ್ಮ ವಿಭಾಗದ ಅಧಿಕಾರಿ/ನೌಕರರ ಸೇವಾ ಪುಸ್ತಕ ಹಾಗೂ ಸಂಬಂಧಪಟ್ಟ ದಾಖಲೆಗಳೊಂದಿಗೆ ಬೆವಿಕಂ ತರಬೇತಿ ಕೇಂದ್ರ, ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಂಗಳೂರು ಇಲ್ಲಿಗೆ ಕೆಳಕಂಡಂತೆ ನಿಗದಿಪಡಿಸಿರುವ ದಿನಾಂಕದಂದು ಖುದ್ದಾಗಿ ಬಂದು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಒದಗಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ:-

| ಕ್ರಮ ಸಂಖ್ಯೆ | ವೃತ್ತ ಕಛೇರಿ | ದಿನಾಂಕ |
|---|---|---|
| 1 | ಕೋಲಾರ ವೃತ್ತ ಮತ್ತು ತುಮಕೂರು ವೃತ್ತ | 27.02.2015 |
| 2 | ಬೆಂಗಳೂರು ಗ್ರಾಮೀಣ ವೃತ್ತ ಮತ್ತು ರಾಮನಗರ ವೃತ್ತ | 28.02.2015 |
| 3 | ದಾವಣಗೆರೆ ವೃತ್ತ | 02.03.2015 |
| 4 | ಬೆಂಗಳೂರು ಉತ್ತರ ವೃತ್ತ ಮತ್ತು ಬೆಂಗಳೂರು ದಕ್ಷಿಣ ವೃತ್ತ | 03.03.2015 |
| 5 | ಬೆಂಗಳೂರು ಪಶ್ಚಿಮ ವೃತ್ತ ಮತ್ತು ಬೆಂಗಳೂರು ಪೂರ್ವ ವೃತ್ತ | 04.03.2015 |

ಒಂದು ವೇಳೆ ಮೇಲೆ ತಿಳಿಸಿದ ನಿರ್ದೇಶನವನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಲೆಕ್ಕಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ನಿಯಾಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

**ವಿಶೇಷ ಸೂಚನೆ:-** ಮೇಲಿನ ತಂತ್ರಾಂಶವನ್ನು ಈಗಾಗಲೇ ಉಪಯೋಗಿಸುತ್ತಿರುವ ಕಚೇರಿಗಳು ಮತ್ತೊಮ್ಮೆ ಮಾಹಿತಿಯನ್ನು ಒದಗಿಸುವ ಅವಶ್ಯಕತೆಯಿರುವುದಿಲ್ಲ.

**ತಮ್ಮ ವಿಶ್ವಾಸಿ,**

**(ಎಂ. ಟಿ. ಶರಣಪ್ಪ)**
**ಪ್ರಭಾರ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)**
**ಬೆ.ವಿ.ಕಂ., ಬೆಂಗಳೂರು**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಬೆ.ವಿ.ಕಂ.
2. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ಬೆ.ವಿ.ಕಂ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ, ಬೆವಿಕಂ.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆವಿಕಂ.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ ಉಗ್ರಾಣ, ಬೆವಿಕಂ, ರಾಜಾಜಿನಗರ, ಬೆಂಗಳೂರು.
6. ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ, ಬೆವಿಕಂ.